

ಚಾರಣವೆಂಬುದು ಬೇವು ಬೆಲ್ಲ

ಚಾರಣವೆನ್ನುವುದು ಮೈಮನಗಳಿಗೆ ಕಸರತ್ತಿನ ಕ್ಷಣವೂ ಹೌದು

ಉತ್ತರಾಖಂಡದ ಘಡವಾಲ್ ಪ್ರಾಂತದಲ್ಲಿರುವ 'ಕೇದಾರಕಂಠ'ವು ಹಿಮಾಲಯದ ಜನಪ್ರಿಯ ಚಾರಣ ಶಿಖರಗಳಲ್ಲಿ ಒಂದು. ಚಳಿಗಾಲದಲ್ಲಿ ಮೈನಸ್ 5ರಿಂದ 10 ಡಿಗ್ರಿ ಸೆಲ್ಸಿಯಸ್ ತಾಪಮಾನದ ಆಸುಪಾಸಿನಲ್ಲಿರುವ ಮೈಹೆಪ್ಪುಗಟ್ಟುವ ಚಳಿಯಲ್ಲಿ ಹಿಮದ ಬೃಹತ್ ಹಾಸಿಗೆಯ ಮೇಲೆ ನಡೆದು, ಸಮುದ್ರ ಮಟ್ಟದಿಂದ ಸುಮಾರು 12530 ಅಡಿ ಎತ್ತರದಲ್ಲಿರುವ ಶಿಖರದ ತುದಿಯನ್ನು ತಲುಪುವುದು ಸಾಮಾನ್ಯ ಸಂಗತಿಯಂತೂ ಅಲ್ಲ. ಅಲ್ಲಿಯ ಹಿಮವು ಕರಗಿ ಹರಿಯುವ ರೀತಿಯಲ್ಲಿಯೇ 'ನಾನು' ಎನ್ನಲು ಕಾರಣವಾಗುವ ಅಹಮಿಕೆಯ ಬಂಧಗಳೆಲ್ಲ ಕರಗುತ್ತ ಹೋಗುತ್ತವೆ. ಹೀಗೆ ಸೊನ್ನೆಯಾಗಲು ಗುಡಿಗುಂಡಾರಗಳನ್ನು ಹುಡುಕಿಕೊಂಡು ಹೋಗದೆ, ಸೊನ್ನೆ–ಒಂದರ ಬೈನರಿ ಆಟದ ಈ ಚಾರಣಕ್ಕೆ ಯುವಕ ಯುವತಿಯರು ಮುಗಿಬೀಳುವುದು ಸಮಾಧಾನದ ಸಂಗತಿಯಂತೂ ಹೌದು. ಇದು ಚಳಿಗಾಲದ ಹಿಮರಾಶಿಯಲ್ಲಿ ಒಂದಾಗುತ್ತ ನಡೆದು ಅದರೊಡನೆ ಬೆರೆತುಹೋಗುವ ಅನುಭವಕ್ಕಾಗಿಯೇ ಇರುವಂತಹ ಶಿಖರ. ಹಾಗಾಗಿ ಅದಕ್ಕೆ ಬೇಕಾದ ದೈಹಿಕ, ಮಾನಸಿಕ